ಸಮರ್ಪಿಸಿದ ಅಭಿನಂದನಾ ಗ್ರಂಥದ ಹೆಸರೂ 'ನೆಲದ ಬದುಕು'!

ಇಷ್ಟೊಂದು ವಿಪುಲವಾಗಿ ಬರೆದವರನ್ನು ಮಾತನಾಡಿಸಲು ಹೋಗುವ ಮುನ್ನ ಅವರನ್ನು ಪೂರ್ತಿಯಾಗಿ ಓದಿಕೊಳ್ಳುವ ಸವಾಲು ಇರುವಂತೆಯೇ ಆತ್ಮಚರಿತ್ರೆಯನ್ನೂ ಬರೆದವರನ್ನು ಮತ್ತೆ ಮತ್ತೆ ಪ್ರಶ್ನೆಗಳ ಮೂಲಕ ಕಾಡಿಸಿ ಪೀಡಿಸಿ ಹೊಸತೇನಾದರೂ ಆಡಿಸುವ ಸವಾಲೂ ಇತ್ತು. ಆದರೂ ಭಂಡ ಧೈರ್ಯದಿಂದಲೇ ಹೊರಟಿದ್ದೆ. ಎರಡೂವರೆ ಮೂರು ಗಂಟೆಗಳ ಕಾಲ ಗಟ್ಟಿಯವರು ಆಡಿದ ಮಾತುಗಳಿಂದ ಆಯ್ದ ಮಾತು–ಕತೆಗಳು ಇದೋ ಇಲ್ಲಿವೆ.

## ಆರಂಭದ ದಿನಗಳು

ನಾನು ತುಂಬ ಓದ್ತಿದ್ದೆ. ಸಿಕ್ಕಾಪಟ್ಟೆ ಓದ್ತಿದ್ದೆ. ಮತ್ತೆ ನಾನು ಮನುಷ್ಯರನ್ನು, ಸುತ್ತಲಿನವರನ್ನು ಅಧ್ಯಯನ ಮಾಡುವುದು ಜಾಸ್ತಿ. ಅದು ಅಧ್ಯಯನವೇ ನನಗೆ. ನನ್ನ ಸ್ನೇಹಿತರಾಗಿ ಇರುವವರು, ಇಥಿಯೋಪಿಯದಲ್ಲಿ ಜೊತೆಗಿದ್ದವರೂ ನಿಜವಾಗಿ ಪಾತ್ರಗಳೇ ಆಗಿಬಿಟ್ಟಿದ್ದಾರೆ. ಜಗತ್ತನ್ನು ನೋಡುವ ರೀತಿ ಒಂದು. ಮತ್ತು ಓದು ಇನ್ನೊಂದು. ತಂದೆಯವರ ಪ್ರಭಾವ ಸ್ವಲ್ಪ ಇದೆ ನನ್ನ ಮೇಲೆ. ಅವರು ಯಾರು ಒಂದು ಪೆಟ್ಟು ಕೊಟ್ರೂ ವಾಪಸ್ಸು ಪೆಟ್ಟು ಕೊಡುವ ಮನುಷ್ಯ ಅಲ್ಲ. ಸಾಧು ಸ್ವಭಾವ ಅಂತಲ್ಲ. ಅವರ ನಿಷ್ಠೆ ಹೇಗಿತ್ತು ಅಂತಂದ್ರೆ ಒಂಥರಾ ಗಾಂಧೀಜಿಯ ಹಾಗೆ. ಆದ್ರೆ ಗಾಂಧೀಜಿಯ ಹಾಗೂ ಅಲ್ಲ ಅವರು. ಸಂಸಾರವಂದಿಗ. ಅವರು ಒಳ್ಳೆಯ ಸಂಪಾದನೆ ಮಾಡ್ತಿದ್ದ ಕಾಲವಿತ್ತು. ಯಕ್ಷಗಾನ ವೇಷಧಾರಿಯಾಗಿ. ಕೊನೆಯ ಕಾಲದಲ್ಲಿ, ಅವರಿಗೆ ಅರವತ್ತು ವರ್ಷವಾದಾಗ ತುಂಬ ಬಡತನ ಬಂತು. ಆ ಬಡತನ ಹೇಗೆ ಬಂತು ಅಂದ್ರೆ ಇಂಗ್ಲೀಷರು ಹೋದ ಕೂಡ್ಲೆ ಬಂದ ಬಡತನ ಅದು. ಎಷ್ಟು ಭಯಂಕರವಾಗಿತ್ತು ಬಡತನ ಅಂತ ಹೇಳಿದ್ರೆ, ಜನ ಹೇಳ್ತಿದ್ರು, ಇಂಗ್ಲೀಷರಿದ್ರೇ ಚೆನ್ನಾಗಿತ್ತು. ಎಲ್ಲರೂ ಗೆಣಸು, ಹಲಸಿನ ಹಣ್ಣು ಎಲ್ಲ ತಿಂದುಕೊಂಡು ದಿನ ಕಳೆಯುವ ಸ್ಥಿತಿ ಬಂದಿತ್ತು. ಬಹಳ ಕಡಿಮೆ ಮಂದಿ ಮೂರು ಹೊತ್ತು ಊಟ ಮಾಡುವುದು ಸಾಧ್ಯ ಇತ್ತು ಅಷ್ಟೆ. ಹಾಗಿರುವಾಗ ನಮ್ಮದೇನು ಪ್ರತ್ಯೇಕ ಅಂತೇನೂ ಅಲ್ಲ. ನಾವು ಸಹ ಅದೇ ತರ ಇತ್ತು. ಒಂದು ದಿವಸ ಮಾತ್ರ ರಾತ್ರಿ ಮನೆಯಲ್ಲಿ ಏನೂ ಇರಲಿಲ್ಲ ತಿನ್ಲಿಕ್ಕೆ. ಆಗ ಅತ್ತಿಹಣ್ಣನ್ನು ತಂದು ತಿಂದಿದ್ದೇವೆ. ಅದನ್ನು ನೋಡಿ, ಅಷ್ಟರವರೆಗೆ ನಾನು ನನ್ನ ತಂದೆಯವರ ಕಣ್ಣಲ್ಲಿ ಕಣ್ಣೀರು ಕಂಡವನಲ್ಲ. ಅವರು ಅಳುವವರಲ್ಲ, ಅಳುವ ಸ್ವಭಾವ ಇರಲಿಲ್ಲ ಅವರಲ್ಲಿ. ಬಹಳ ಕಡಿಮೆ ಮಾತು. ಮಾತು ಮಾತ್ರ ಪ್ರತಿಯೊಂದು ಮಾತು ಕೂಡ ಒಂದು ಸುಭಾಷಿತ ಇದ್ದ ಹಾಗಿರ್ತಿತ್ತು. ಅದೆಲ್ಲವು ನನ್ನ ಮನಸ್ಸಿನ ಮೇಲೆ ಪರಿಣಾಮ ಬೀರಿರಬಹುದು. ಒಂದು ಮಾತು ಕೂಡ ಪರಿಣಾಮ ಬೀರ್ತದೆ. ಆ ಮಾತು ಹಾಗೆಯೇ ಉಳಿದು ಬಿಡ್ತದೆ ಅದು. ಆ ಮಾತಿನಲ್ಲೆ ಒಂದು ವಿಶ್ವರೂಪ ಕಾಣ್ತದೆ ನಮಗೆ. ಅದನ್ನು ಮಥಿಸ್ತಾ ಇರ್ತದೆ ಮನ. ಮತ್ತೆ ಕನಕದಾಸರ ಕೀರ್ತನೆಗಳು, ಪುರಂದರದಾಸರ ಕೀರ್ತನೆಗಳು, ಎಲ್ಲಾ ಪೌರಾಣಿಕ ಗ್ರಂಥಗಳು ಮನೆಯಲ್ಲಿದ್ದವು. ಅದೆಲ್ಲ ನಾನು ಓದುವುದು. ನಾನು ಕನಕದಾಸರ ಕೀರ್ತನೆಗಳನ್ನು ಮತ್ತೆ ಮತ್ತೆ ಕೇಳ್ತಿದ್ದೆ. ಪುರಂದರದಾಸರ ಕೀರ್ತನೆಗಳಿಗಿಂತ ಕನಕದಾಸರ ಕೀರ್ತನೆಗಳು ನನಗೆ ಆಗಲೇ ಇಷ್ಟ. ಅದರ ಒಳಗೆ ಏನೋ ಒಂದುಂಟಲ್ಲ. ಆಗ ಅರ್ಥ ಆಗದಿದ್ದರೆ ತಂದೆಯವರ ಹತ್ತಿರ ಕೇಳ್ತಿದ್ದೆ. ಅವರು ಪ್ರತಿಯೊಂದಕ್ಕು ಅರ್ಥ ಹೇಳ್ತಿದ್ದರು. ಅದೊಂದು ಆನಂದದ ಕಾಲ. ಕಲೀತಿದ್ದೆ ನಾನು. ಮನೇಲಿದ್ದಾಗಲೆಲ್ಲ ಇದೇ ಕೆಲಸ. ಅದೂ ಇದೂ ಓದುವುದು, ಅರ್ಥ ಕೇಳುವುದು.

ಸೋಮೇಶ್ವರ ಶತಕ ಎಲ್ಲ ಬೈಹಾರ್ಟ್ ಮಾಡ್ತಿದ್ದೆ ನಾನು. ಈಗಲೂ ನನಗೆ ಅವು ಬರ್ತವೆ.